**57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ,**
**ಮೆಯೋಹಾಲ್ ಘಟಕ, ಬೆಂಗಳೂರು.**
**(58ನೇ ನಗರ ಸಿವಿಲ್ ನ್ಯಾಯಾಂಗಣ)**

ದಿನಾಂಕಃ 21 ನೇ ಮಾಹೇ ಆಗಸ್ಟ್, 2021.

-ಃ ಉಪಸ್ಥಿತರು ಃ-

ಶ್ರೀಮತಿ ಕೆ. ಜಿ. ಶಾಂತಿ, *ಬಿ.ಕಾಮ್ ಎಲ್ಎಲ್.ಎಂ.,*
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು.

**ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ ಃ 25921/2021**

ಅರ್ಜಿದಾರ/
(ಆರೋಪಿ-1)ಃ **ಬಿ.ಎಂ.ನಾರಾಯಣ** ಬಿನ್ ಲೇಟ್ ಮುನಿಯಪ್ಪ ,
ವಯಸ್ಸು ಃ 51 ವರ್ಷ,
ವಾಸಃ ನಂ.100, 5 ನೇ ಅಡ್ಡರಸ್ತೆ ,
ಚಿಕ್ಕಬಸವನಪುರ, ವಿಗ್ನೋನಗರ ಅಂಚೆ,
ಬೆಂಗಳೂರು-560 049.

(ಪರವಾಗಿ ಶ್ರೀ *ಹರೀಶ್ ಪ್ರಭು*, ವಕೀಲರು)

**ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ ಃ 25930/2021**

ಅರ್ಜಿದಾರ/
(ಆರೋಪಿ-2)ಃ ವೆಂಕಟೇಶ ಬಿನ್ ಲೇಟ್ ಮುನಿಯಪ್ಪ ,
ವಯಸ್ಸು ಃ ಸುಮಾರು 64 ವರ್ಷ,
ವಾಸಃ ನಂ. 17, 2 ನೇ ಅಡ್ಡರಸ್ತೆ ,
ಚಿಕ್ಕಬಸವನಪುರ ಮುಖ್ಯರಸ್ತೆ , ಕೆ.ಆರ್.ಪುರಂ,
ಬೆಂಗಳೂರು-560 036.

(ಪರವಾಗಿ ಶ್ರೀ *ಹೇಮಂತ್ ಕುಮಾರ್*, ವಕೀಲರು)

-ವಿರುದ್ಧ-

ಎದುರುದಾರರು ಃ ರಾಜ್ಯದ ಪರವಾಗಿ ಕೆ.ಆರ್.ಪುರಂ, ಪೊಲೀಸ್ ಠಾಣೆ,
ಬೆಂಗಳೂರು.

(ಪರವಾಗಿ ಸರ್ಕಾರಿ ಅಭಿಯೋಜಕರು)

**ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ**

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿ, ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿರುತ್ತಾರೆ.

2. ಇವರು ತಮ್ಮ ಅರ್ಜಿಯಲ್ಲಿ ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 227/2021 ಭಾರತೀಯ ದಂಡ ಸಂಹಿತೆ ಕಲಂ: 420, 506 ಸಹವಾಚಕ 34 ರಡಿಯಲ್ಲಿ ದಾಖಲಿಸಿರುವುದಾಗಿ ಹೇಳಿರುತ್ತಾರೆ. ತಮಗೆ ದಸ್ತಗಿರಿ ಆಗುವ ಭಯ ಇರುವುದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

3. ಅರ್ಜಿಯ ಸಂಕ್ಷಿಪ್ತ ಸಾರಾಂಶದ ಪ್ರಕಾರ ಪಿರ್ಯಾದುದಾರರಾದ ಶ್ರೀ.ಬೊಮ್ಮಯ್ಯರವರು ಚಿಕ್ಕಬಸವನಪುರದ ವಾಸಿಯಾದ ಬಿ.ಎಂ.ನಾರಾಯಣ ಮತ್ತು ಕುಟುಂಬದವರು ಪಿರ್ಯಾದಾರರಿಗೆ ಪರಿಚಯದವರಾಗಿದ್ದು, ಅವರ ಬಳಿ 20 x 30 ಅಡಿಗಳ ನಿವೇಶನವನ್ನು ಗಾಯತ್ರಿ ಬಡಾವಣೆ ಕಡೆಯ ಪ್ರಿಯದರ್ಶಿನಿ ಬಡಾವಣೆಯಲ್ಲಿ 24 ಲಕ್ಷ ರೂಗಳಿಗೆ ಮಾತುಕತೆಯಾಗಿ ನಾರಾಯಣ ಮತ್ತು ವೆಂಕಟೇಶ್ ರವರಿಗೆ 12 ಲಕ್ಷ ರೂ ನಗದು ಹಣ ಮತ್ತು 3 ಚೆಕ್ ಅನ್ನು ನೀಡಿ ದಿ: 11.02.2020 ರಂದು ಸೇಲ್ ಅಗ್ರಿಮೆಂಟ್ ಪತ್ರ ಮಾಡಿ, ಉಳಿಕೆ ಹಣ ಹೊಂದಿಸಿಕೊಂಡು ಸೈಟ್ ರಿಜಿಸ್ಟರ್ ಮಾಡಿಸುವಂತೆ ಕೇಳಿದಾಗ ಏನಾದರು ಒಂದು ನೆಪ ಹೇಳುತ್ತಿದ್ದರು. ದಿ: 09.08.2021 ರಂದು ಸಂಜೆ 4-00 ಗಂಟೆಯ ಸುಮಾರಿಗೆ ಅಪ್ಪಯ್ಯರವರೊಂದಿಗೆ ಪಿರ್ಯಾದುದಾರರು ನಾರಾಯಣರವರ ಮನೆ ಹತ್ತಿರ ಹೋಗಿ, ಸೈಟ್ ರಿಜಿಸ್ಟರ್ ಮಾಡಿ ಇಲ್ಲವಾದರೆ ನೀಡಿರುವ ಹಣವನ್ನಾದರು ವಾಪಸ್ಸು ಕೊಡಿ ಎಂದು ಕೇಳಿದಾಗ ನಾರಾಯಣ ಮತ್ತು ವೆಂಕಟೇಶ್ ರವರು ಪಿರ್ಯಾದುದಾರರಿಗೆ ಬಾಯಿಗೆ ಬಂದ ಹಾಗೆ ಬೈದು, ಸೈಟಿನ ವಿಚಾರವಾಗಿ ಮಾತನಾಡಿದರೆ ನಿನ್ನ ಮೇಲೆ ದೂರು ನೀಡಿ ಜೈಲಿಗೆ ಕಳುಹಿಸುವುದಾಗಿ ಪ್ರಾಣ ಬೆದರಿಕೆ

ಹಾಕಿರುತ್ತಾರೆ. ಸೈಟ್ ನೀಡುತ್ತೇನೆಂದು ಹೇಳಿ ಪಿರ್ಯಾದುದಾರರಿಂದ ಹಣ ಪಡೆದು, ಸೈಟನ್ನು ನೀಡದೆ ಮೋಸ ಮಾಡಿ, ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಆರೋಪಿತರ ವಿರುದ್ಧ ದೂರು ದಾಖಲಾಗಿರುತ್ತದೆ.

4. ಅರ್ಜಿದಾರರು ತಾವು ಅಮಾಯಕರಿದ್ದು, ತಾವು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ, ತಮ್ಮನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ಮೇಲ್ನೋಟಕ್ಕೆ ತಮ್ಮ ವಿರುದ್ಧ ಯಾವುದೇ ಆಪಾದನೆಗಳು ಕಂಡುಬರುತ್ತಿಲ್ಲವೆಂದೂ, ತಾವು ಕಾನೂನು ಪರಿಪಾಲನೆ ಮಾಡುವ ನಾಗರೀಕನರಿದ್ದು, ಗೌರವಾನ್ವಿತ ಕುಟುಂಬದವರಾಗಿದ್ದು, ಕುಟುಂಬ ನಿರ್ವಹಣಾ ಜವಾಬ್ದಾರಿ ಇರುತ್ತದೆ. ತಾವು ತನಿಖೆಗೆ ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ತಾವು ಸಿದ್ದರಿದ್ದೇವೆಂದು, ತಮಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ, ತುಂಬಲಾರದ ತೊಂದರೆ ಉಂಟಾಗುತ್ತದೆ ಎಂದು ಹೇಳಿ, ತಮ್ಮ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾರೆ.

5. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ ಆರೋಪಿತರಿಗೆ ಅಮಾಯಕರನ್ನು ನಂಬಿಸಿ ಮೋಸ ಮಾಡುವ ಪ್ರವೃತ್ತಿಯುಳ್ಳವರಾಗಿದ್ದು, ಜಾಮೀನು ನೀಡಿದರೆ ಇದೇ ರೀತಿ ಹಲವಾರು ಜನರಿಗೆ ಮೋಸ ಮಾಡುವ ಸಾಧ್ಯತೆಗಳಿರುತ್ತವೆಯೆಂದು, ಆರೋಪಿತರು ಪ್ರಕರಣ ದಾಖಲಾದಾಗಿನಿಂದಲೂ ತನಿಖೆಗೆ ಲಭ್ಯವಿಲ್ಲದೇ ಪರಾರಿಯಲ್ಲಿದ್ದು ಈ ಹಂತದಲ್ಲಿ ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಅವರು ಪರಾರಿಯಾಗುವ ಸಾಧ್ಯತೆಯಿರುತ್ತದೆ. ಅರ್ಜಿದಾರರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ತನಿಖೆ ಕುಂಠಿತವಾಗುವ, ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ ಸಾಧ್ಯತೆಗಳಿರುವ ಕಾರಣ ತನಿಖಾ ವರದಿಯನ್ನು ಪರಿಗಣಿಸುವಂತೆ ವಿನಂತಿಸಿ, ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

6. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದವನ್ನು ಆಲಿಸಲಾಯಿತು.

7. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆಃ-

i) ಅರ್ಜಿದಾರರು ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 438 ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹನಿದ್ದಾರಯೇ?

ii) ಏನು ಆದೇಶ?

8. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

ಅಂಶ i) ಃ ಸಕಾರಾತ್ಮಕವಾಗಿ,

ಅಂಶ ii) ಃ ಅಂತಿಮ ಆದೇಶದಂತೆ, ಈ ಕೆಳಕಂಡಂತೆಃ

## ಕಾ ರ ಣ ಗ ಳು

9. **ಅಂಶ i)** ಃ ಅರ್ಜಿದಾರರು ತಾವು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತಮ್ಮನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ತಾವು ಕಾನೂನು ಪರಿಪಾಲನೆ ಮಾಡುವ ನಾಗರೀಕರಿದ್ದು, ತಮಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದು ಹೇಳಿ, ತಮ್ಮನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

10. ಅರ್ಜಿದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಪ್ರಕರಣದ ಪಿರ್ಯಾದುದಾರರು ಮತ್ತು ಆರೋಪಿಗಳ ನಡುವೆ ಸಿವಿಲ್ ವ್ಯಾಜ್ಯ ಇರುವುದು ಕಂಡುಬರುತ್ತದೆ. ಈ ಬಗ್ಗೆ ಪಿರ್ಯಾದುದಾರ ಬೊಮ್ಮಯ್ಯರವರು ಒಂದು ಪಿರ್ಯಾದನ್ನು ನೀಡಿದ್ದು , ಕೆ.ಆರ್.ಪುರಂ ಪೊಲೀಸ್ ನವರು ಈ ಬಗ್ಗೆ ದಿನಾಂಕಃ 12.01.2021 ರಂದು ಹಿಂಬರಹವನ್ನು ನೀಡಿರುತ್ತಾರೆ. ನಂತರದಲ್ಲಿ ದಿನಾಂಕಃ 09.08.2021 ರಂದು ಬೊಮ್ಮಯ್ಯ ಅವರು ಈ ಕೇಸಿನ ಅರ್ಜಿದಾರರು ನಾರಾಯಣ ಮತ್ತು ವೆಂಕಟೇಶ್

ರವರ ವಿರುದ್ಧ ಮತ್ತೊಂದು ಪಿರ್ಯಾದನ್ನು ದಿನಾಂಕಃ 09.08.2021 ರಂದು ನೀಡಿದ್ದು , ಈ ಕಾರಣ ಪೊಲೀಸ್ ನವರು ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತಾರೆ.

12. ಅರ್ಜಿದಾರರ ವಿರುದ್ದ ದಾಖಲಾದ ಆಪಾದನೆಗಳು ಜಾಮೀನು ರಹಿತ ಪ್ರಕರಣ ಅಪರಾಧವಾಗಿದ್ದು, ಮಹಾನಗರ ದಂಢಾಧಿಕಾರಿಗಳ ಕಾರ್ಯ ವ್ಯಾಪ್ತಿಯಲ್ಲಿ ವಿಚಾರಣೆಗೆ ಒಳಪಡುವಂತಹ ಅಪರಾಧವಾಗಿದ್ದು, ಜೀವಾವಧಿ ಅಥವಾ ಮರಣದಂಡನೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ. ಅರ್ಜಿದಾರರು ಸಾಕ್ಷ್ಯಗಳನ್ನು ನಾಶಪಡಿಸುವಂತಹ ಸಾಮರ್ಥ್ಯವುಳ್ಳವರು ಮತ್ತು ಇತರರಿಗೆ ಮೋಸ ಮಾಡುವ ಪ್ರವೃತ್ತಿವುಳ್ಳವರು ಎಂದು ಸಹ ಈ ಹಂತದಲ್ಲಿ ಕಂಡುಬರುವುದಿಲ್ಲ. ಅಭಿಯೋಜನೆಯು ಸಹ ಅರ್ಜಿಯನ್ನು ನಿರಾಕರಿಸಲು ಬೇಕಾಗುವಷ್ಟು ಕಾರಣಗಳನ್ನು ನ್ಯಾಯಾಲಯದ ಮುಂದೆ ಇಟ್ಟಿರುವುದಿಲ್ಲ.

11. ಅರ್ಜಿದಾರರ ಮೇಲೆ ಜಾಮೀನು ರಹಿತ ಪ್ರಕರಣ ದಾಖಲಾಗಿದ್ದು ಅವರನ್ನು ಪೊಲೀಸಿನವರು ದಸ್ತಗಿರಿ ಮಾಡುವ ಎಲ್ಲಾ ಸಾಧ್ಯತೆಗಳು ಇರುತ್ತವೆ, ಆದ್ದರಿಂದ ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಜಾಮೀನು ಮಂಜೂರು ಮಾಡಬಹುದೆಂಬ ಅಭಿಪ್ರಾಯಕ್ಕೆ ಬಂದು ಅಂಶ-1 ಕ್ಕೆ **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

12. **ಅಂಶ ii)ಃ** ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರರಾದ **ವೆಂಕಟೇಶ್** ಬಿನ್ ಲೇಟ್ ಮುನಿಯಪ್ಪ (ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆಃ 25921/2021), **ಬಿ.ಎಂ. ನಾರಾಯಣ** ಬಿನ್ ಲೇಟ್ ಮುನಿಯಪ್ಪ (ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆಃ 25930/2021) ಇವರ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು

ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಕೆ.ಆರ್.ಪುರಂ ಪೋಲೀಸ್ ಠಾಣೆಯ ಕ್ರೈಮ್ ನಂಬರ್ 227/2020 ರಲ್ಲಿನ ಭಾರತೀಯ ದಂಡ ಸಂಹಿತೆ ಕಲಂಃ 420, 506 ಸಹವಾಚಕ 34 ರಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರರು ಈ ಆದೇಶವಾದ 30 ದಿನಗಳ ಒಳಗೆ ತನಿಖಾಧಿಕಾರಿಯ ಮುಂದೆ ಹಾಜರಾಗಿ ತಲಾ ರೂ.50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ತನಿಖಾಧಿಕಾರಿಯ ಮುಂದೆ ಅಥವಾ ಕಾರ್ಯ ವ್ಯಾಪ್ತಿಯಲ್ಲಿರುವ ನ್ಯಾಯಾಲಯಕ್ಕೆ ತೃಪ್ತಿಯಾಗುವಂತೆ ನೀಡತಕ್ಕದ್ದು.

2. ಅರ್ಜಿದಾರರು ಹಾಗೂ ಜಾಮೀನುದಾರನು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು.

3. ಅರ್ಜಿದಾರರು ತನಿಖಾಧಿಕಾರಿಯ ತನಿಖೆಗೆ ಸಹಕರಿಸುವಂತೆ ಕರೆದಾಗ ಅವರ ಮುಂದೆ ಹಾಜರಾಗತಕ್ಕದ್ದು.

4. ಅರ್ಜಿದಾರರು ಪ್ರತಿ ತಿಂಗಳ ಎರಡನೇ ಶನಿವಾರ ಬೆಳಗ್ಗೆ 9-00 ಗಂಟೆಯಿಂದ ಸಂಜೆ 5-00 ಗಂಟೆ ನಡುವಿನ

ಅವಧಿಯಲ್ಲಿ ಮುಂದಿನ 6 ತಿಂಗಳವರಗೆ ಠಾಣಾಧಿಕಾರಿಯ ಮುಂದೆ ಹಾಜರಾಗಿ ಹಾಜರಾತಿ ನೀಡತಕ್ಕದ್ದು.

5. ಅರ್ಜಿದಾರರು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾದಾರಗಳನ್ನು ನಾಶಪಡಿಸಬಾರದು.

6. ಅರ್ಜಿದಾರರು ತಮ್ಮ ವಾಸದ ಬಗ್ಗೆ ಧೃಢೀಕೃತ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಒಂದು ವೇಳೆ ತನ್ನ ವಾಸವನ್ನು ಬದಲು ಮಾಡುವ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ವಿಷಯವನ್ನು ತಿಳಿಸತಕ್ಕದ್ದು ಮತ್ತು ತನ್ನ ಬದಲಾದ ವಿಳಾಸವನ್ನು ನ್ಯಾಯಾಲಯಕ್ಕೆ/ಸಂಬಂಧಪಟ್ಟ ಠಾಣೆಗೆ ನೀಡಬೇಕು.

(ಈ ಆದೇಶವನ್ನು ತೀರ್ಪುಬರಹಗಾರನಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 21 ನೇ ಮಾಹೇ ಆಗಸ್ಟ್, 2021 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ.)

**(ಶ್ರೀಮತಿ ಕೆ. ಜಿ. ಶಾಂತಿ)**
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು.

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ **ಮಹದೇವರಾಜ್** ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ರಾಮಮೂರ್ತಿನಗರ ಪೋಲೀಸ್ ಠಾಣೆಯ ಕ್ರೈಮ್ ನಂಬರ್ 213/2020 ರಲ್ಲಿನ ಭಾರತೀಯ ದಂಡ ಸಂಹಿತೆ ಕಲಂ: 420 ರಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರನು ಈ ಆದೇಶವಾದ 30 ದಿನಗಳ ಒಳಗೆ ತನಿಖಾಧಿಕಾರಿಯ ಮುಂದೆ ಹಾಜರಾಗಿ ರೂ.50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ತನಿಖಾಧಿಕಾರಿಯ ಮುಂದೆ ಅಥವಾ ಕಾರ್ಯ ವ್ಯಾಪ್ತಿಯಲ್ಲಿರುವ ನ್ಯಾಯಾಲಯಕ್ಕೆ ತೃಪ್ತಿಯಾಗುವಂತೆ ನೀಡತಕ್ಕದ್ದು.

2. ಅರ್ಜಿದಾರನು ಹಾಗೂ ಜಾಮೀನುದಾರನು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು.

3. ಅರ್ಜಿದಾರನು ತನಿಖಾಧಿಕಾರಿಯ ತನಿಖೆಗೆ ಸಹಕರಿಸುವಂತೆ ಕರೆದಾಗ ಅವರ ಮುಂದೆ ಹಾಜರಾಗತಕ್ಕದ್ದು.

4. ಅರ್ಜಿದಾರನು ಪ್ರತಿ ತಿಂಗಳ ಎರಡನೇ ಶನಿವಾರ ಬೆಳಗ್ಗೆ 9-00 ಗಂಟೆಯಿಂದ ಸಂಜೆ 5-00 ಗಂಟೆ ನಡುವಿನ ಅವಧಿಯಲ್ಲಿ ಮುಂದಿನ 6 ತಿಂಗಳವರಗೆ ಠಾಣಾಧಿಕಾರಿಯ ಮುಂದೆ ಹಾಜರಾಗಿ ಹಾಜರಾತಿ ನೀಡತಕ್ಕದ್ದು.

5. ಅರ್ಜಿದಾರನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾದಾರಗಳನ್ನು ನಾಶಪಡಿಸಬಾರದು.

6. ಅರ್ಜಿದಾರನು ತನ್ನ ವಾಸದ ಬಗ್ಗೆ ಧೃಢೀಕೃತ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಒಂದು ವೇಳೆ ತನ್ನ ವಾಸವನ್ನು ಬದಲು ಮಾಡುವ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ವಿಷಯವನ್ನು ತಿಳಿಸತಕ್ಕದ್ದು ಮತ್ತು ತನ್ನ ಬದಲಾದ ವಿಳಾಸವನ್ನು ನ್ಯಾಯಾಲಯಕ್ಕೆ/ಸಂಬಂಧಪಟ್ಟ ಠಾಣೆಗೆ ನೀಡಬೇಕು.

57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,

**ಮೆಯೋಹಾಲ್ ಘಟಕ, ಬೆಂಗಳೂರು.**